


"ಇದು..."

ಅವನು ಒಂದು ಫೋಟೊ ಮುಟ್ಟಿ ತೋರಿಸಿದ.

ವರ, ಸತೀಶ್ ಕೆ ನಂಬ್ಯಾರ್ **S/O** ಕರುಣಾಕರನ್ ನಂಬ್ಯಾರ್. ಪೊಯ್ಕ ಹೌಸ್, ಕಡಿಇುಮೂಲಂ. ವಧು, ಕೆ.ಆರ್. ಸ್ವಪ್ನ, **D/O** ಕೆ.ಆರ್. ಗೋವಿಂದನ್ ನಂಬ್ಯಾರ್, ತೆರವತ್ತ್ ಹೌಸ್, ಕೊಯಾಂಬುರಂ.

"ನನಗೂ..." ಅವಳು ಹೇಳಿದಳು: "ಮೀಸೆ ಇಲ್ಲದಿದ್ದರೆ ಇದಕ್ಕಿಂತಲೂ ಚೆನ್ನಾಗಿರುತ್ತಿತ್ತು. ಮನುಷ್ಯರಿಗೆ ಯಾಕಪ್ಪ ಇಷ್ಟು ದೊಡ್ಡ ಮೀಸೆ?..."

"ಕೆಲವರಿಗೆ ಮೀಸೆ ಚೆನ್ನಾಗಿ ಒಪ್ಪುತ್ತೆ..."

"ದೊಡ್ಡವನಾದ ಮೇಲೆ ನೀನೂ ಮೀಸೆ ಬಿಡ್ತಿಯಾ?..."

"ಮತ್ತೆ... ಬಿಡದೆ ಇರ್ತಿನಾ..."

ಹಿಂದಿನಿಂದ ಒಂದು ಮಕ್ಕಳ ಗುಂಪು ಒಳಗಡೆ ಬರುವುದನ್ನು ಕಂಡು ಅವಳು ತಕ್ಷಣ ತನ್ನ ಬೌಂಡ್‌ಬುಕ್ಕನ್ನು ಮುಚ್ಚಿಟ್ಟಳು. ಅವರು ಶಾಲೆಯ ಹತ್ತಿರ ಬಂದು ಸೇರಿಯಾಗಿತ್ತು. ರಸ್ತೆಯ ಉದ್ದಕ್ಕೂ ಮಕ್ಕಳು. ಸೈಂಟ್ ಆಂತೋಣಿ ಪಬ್ಲಿಕ್ ಸ್ಕೂಲ್‌ನಿಂದ ಹೆಚ್ಚಿಗೆ ದೂರವಿರಲಿಲ್ಲ ಅವರು ಕಲಿಯುವ ಸರ್ಕಾರಿ ಹೈಯರ್ ಸೆಕಂಡರಿ ಶಾಲೆ. ಮೆರೂನ್ ಬಣ್ಣದ ಟೈ, ಅದೇ ಬಣ್ಣದ ಸ್ಕರ್ಟು, ಟ್ರೌಸರನ್ನು ಧರಿಸಿರುವವರೆಂದರೆ ಅವರು ಸೈಂಟ್ ಅಂತೋಣಿ ಶಾಲೆಯಲ್ಲಿ ಓದುವ ಮಕ್ಕಳು.

"ಬಹಳ ಜಂಬ, ಆ ಶಾಲೆ ಮಕ್ಕಳಿಗೆ..." ಅವಳು ಹೇಳಿದಳು.

"ಅವರಿಗೆ ಸ್ವಂತ ಸ್ಕೂಲ್‌ಬಸ್